ದಿನಾಂಕಃ 20-06-2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ** 6 ನೇ ಎದುರುದಾರ ಪರ ಶ್ರೀ ಎ ಎಸ ಪಿ ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣೆಯ ಸಾಕ್ಷಿಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದ ಸಂಗತಿಗಳೆಲ್ಲವನ್ನು ನಾನೇ ಸ್ವತಃ ಹೇಳಿ ಬರೆಯಿಸಿದ್ದು ಅವೆಲ್ಲವುಗಳು ಸತ್ಯವಾಗಿರುತ್ತವೆ.

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾನು ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಶಾನೆಗಳಾಗಿ ಗುರುತಿಸಲು ಕೋರುತ್ತೇನೆ. ಸಾಕ್ಷಿಯು ಹಾಜರುಪಡಿಸಿ ನೋಡಿ ಗುರುತಿಸಿದ ದಾಖಲೆಗಳನ್ನು ಈ ಕೆಳಗಿನಂತೆ ನಿಶಾನೆಗಳಾಗಿ ಗುರುತಿಸಲಾಯಿತು.

| | |
|---|---|
| ನಿಆರ್ 9 | ಅಧಿಕಾರ ಪತ್ರ |
| ನಿಆರ್ 10 | ವಿಮಾ ಪತ್ರದ ಪ್ರತಿ |

ಆದ್ದರಿಂದ ಅರ್ಜಿಯನ್ನು ವಜಾ ಮಾಡಬೇಕೆಂದು ವಿನಂತಿಸುತ್ತೇನೆ.

**ಪಾಟೀ ಸವಾಲುಃ**- ಅರ್ಜಿದಾರ ಪರ ಶ್ರೀ ಬಿ ಸಿ ಕೆ ವಕೀಲರಿಂದ

ಈ ಅರ್ಜಿಯಲ್ಲಿ ಅರ್ಜಿದಾರರು ಹಾಜರುಪಡಿಸಿದ ಪೊಲೀಸು ದಾಖಲೆಗಳ ಬಗ್ಗೆ ಮಾಹಿತಿ ಗೊತ್ತಿರುತ್ತದೆ. ಪೊಲೀಸರು ತನಿಖೆ ಕೈಗೊಂಡು ವಾಹನ ಸಂಖ್ಯೆ ಕೆಎ 40/ಎ 0667 ರ ವಾಹನ ಚಾಲಕ ಶಂಕರ ಬಿ. ಬಿರೇಶ ಇವರನ್ನು ಆರೋಪಿ ನಂ. 1 ಎಂದು ಕಾಣಿಸಿ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಆರೋಪಿತನು ವಾಹನ ಸಂಖ್ಯೆ ಕೆಎ 04/ಸಿ 6479 ನೇ ದ್ದಕ್ಕೆ ಹಿಂದಿನಿಂದ

ಹಾಯಿಸಿ ಡಿಕ್ಕಿಪಡಿಸಿರುವುದಾಗಿ ಆಪಾದಿಸಿ ದೋಷಾರೋಪಣೆ ಪತ್ರ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಅಪಘಾತದಿಂದ ಅರ್ಜಿದಾರರಿಗೆ ತೀವ್ರ ಸ್ವರೂಪದ ಗಾಯ ಆಗಿರುತ್ತದೆ ಎಂದರೆ ಸರಿ. ವಾಹನ ಸಂಖ್ಯೆ ಕೆಎ 04/ಸಿ 6479 ರ ಚಾಲಕನಿಗೆ ವಾಹನ ಚಾಲನೆ ಪರವಾನಿಗೆ ಪತ್ರ ಇತ್ತು ಮತ್ತು ವಾಹನದ ವಿಮೆ ಚಾಲ್ತಿಯಲ್ಲಿ ಇತ್ತು ಎಂದರೆ ಸರಿ.

**ಪಾಟಿ ಸವಾಲುಃ-** ಎದುರುದಾರ ನಂ. 2 ಪರ ಶ್ರೀ ಎನ್. ಡಿ ವಕೀಲರಿಂದ

ನಾನು ಸಾಕ್ಷ್ಯ ನುಡಿಯುವ ಪೂರ್ವದಲ್ಲಿ ಅರ್ಜಿದಾರರು ಹಾಜರುಪಡಿಸಿದ ಪೊಲೀಸು ದಾಖಲೆಗಳನ್ನು ನೋಡಿರುತ್ತೇನೆ. ನಾವು ವಿಮೆ ಪತ್ರ ನೀಡಲಾದ ವಾಹನ ಸಂಖ್ಯೆ ಕೆಎ 04/ಸಿ 6479 ರ ವಾಹನದ ಪ್ರಯಾಣಿಕರ ಸಂಖ್ಯೆ 12 ಪ್ಲಸ್ 1 ಇರುತ್ತದೆ. ಸದರಿ ವಾಹನದಲ್ಲಿ ಪೊಲೀಸರು ತನಿಖೆ ಕೈಗೊಂಡ ಪ್ರಕಾರ 13 ಜನಗಿಂತಲೂ ಹೆಚ್ಚಿಗೆ ಜನರು ಪ್ರಯಾಣಿಸುತ್ತಿದ್ದರು ಎಂದರೆ ನನಗೆ ಮಾಹಿತಿ ಇಲ್ಲ. ಹಾಗೆ ಹೆಚ್ಚಿಗೆ ಜನರು ಪ್ರಯಾಣಿಸಿದ್ದಲ್ಲಿ ಪ್ರಯಾಣಿಕರಿಗೆಲ್ಲರಿಗೂ ಗಾಯ ಇಲ್ಲವೇ ಮರಣ ಹೊಂದಿದ್ದಲ್ಲಿ ಅವರಿಗೆ ಪರಿಹಾರ ನೀಡುವ ಹೊಣೆಗಾರಿಕೆ ವಾಹನದ ಮಾಲೀಕರ ಮೇಲೆ ಇರುತ್ತದೆ ಎಂದರೆ ಸರಿಯಲ್ಲ. ಆ ದಿವಸ 13 ಜನಗಿಂತಲೂ ಹೆಚ್ಚಿಗೆ ಜನರು ವಾಹನದಲ್ಲಿ ಪ್ರಯಾಣಿಸುತ್ತಿದ್ದರು ಎಂಬ ಸಂಗತಿ ನನಗೆ ಗೊತ್ತಿದ್ದರೂ ನನಗೆ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವು ದೇವಗಿರಿಯ ತಿರುವು ರಸ್ತೆಯಲ್ಲಿ ಆಗಿರುತ್ತದೆ ಎಂದರೆ ಸರಿ. ಪೋಲಿಸರು ಸಲ್ಲಿಸಿದ

ದೋಷಾರೋಪಣೆ ಪಟ್ಟಿಯಲ್ಲಿ ರೋಡ್ ಹಂಪ್ಸ ಇದ್ದು ವಾಹನ ಸಂಖ್ಯೆ ಕೆಎ 04 ಸಿ 6479 ನೇದ್ದರ ವಾಹನ ಚಾಲಕ ಒಮ್ಮೆಲೇ ಬ್ರೇಕ್ ಹಾಕಿದ್ದರಿಂದ ವಾಹನ ಸಂಖ್ಯೆ ಕೆಎ 40 ಎ 0667 ರ ವಾಹನ ಹಿಂದಿನಿಂದ ಡಿಕ್ಕಿಪಡಿಸಿರುತ್ತದೆ ಎಂದರೆ ಸರಿಯಲ್ಲ. ನನಗೆ ಕನ್ನಡ ಓದಲು ಬರುವುದಿಲ್ಲ. ದೋಷಾರೋಪಣೆಯ ಸಂಗತಿಗಳನ್ನು ನಮ್ಮ ಕಚೇರಿಯ ಕನ್ನಡ ಬಲ್ಲ ಅಧಿಕಾರಿಗಳಿಂದ ಓದಿಸಿ ತಿಳಿದುಕೊಂಡಿಲ್ಲ. ಸಾಕ್ಷಿ ಅದನ್ನು ಇಂಗ್ಲೀಷ ಭಾಷೆಗೆ ಭಾಷಾಂತರಿಸಿ ಓದಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಸಂಗತಿಯನ್ನು ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಹೇಳಲಾಗಿಲ್ಲ ಎಂದರೆ ಸರಿ. ಅಪಘಾತ ಸ್ಥಳವನ್ನು ನಾನು ಇಲ್ಲಿಯವರೆಗೂ ನೋಡಿಲ್ಲ ಎಂದರೆ ಸರಿ. ಯಾವುದೇ ವಾಹನ ಬ್ರೇಕ್ ಹಾಕಿದಲ್ಲಿ ಇಂಡಿಕೇಟರ್ ಹಾಕಬೇಕಾಗುತ್ತದೆ ಎಂದರೆ ಅದು ಗಾಡಿಯ ಕಂಡಿಷನ್ ಮೇಲೆ ಅವಲಂಬಿತವಾಗಿರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ಹಾಗಿದ್ದಾಗ ಮಾತ್ರ ಮುಂದಿನ ವಾಹನ ಬ್ರೇಕ್ ಹಾಕಿದ ವಿಷಯ ಅದರ ಹಿಂದೆ ಬರುವ ವಾಹನಕ್ಕೆ ಗೊತ್ತಾಗುತ್ತದೆ ಎಂದರೆ ಸರಿ. ಹಾಗೆ ಗೊತ್ತಾದ ನಂತರ ಹಿಂದೆ ಬರುವ ವಾಹನದವರು ಬ್ರೇಕ್ ಹಾಕುತ್ತಾರೆ ಎಂದರೆ ಸರಿ. ಅಪಘಾತವು ರಾತ್ರಿ ಆಗಿರುತ್ತದೆ ಎಂದರೆ ಸರಿ. ಅಪಘಾತದ ಕಾಲಕ್ಕೆ ನಾವು ವಿಮೆ ನೀಡಿದ ವಾಹನದ ಚಾಲಕ ಒಮ್ಮೆಲೇ ಮುನ್ಸೂಚನೆ ನೀಡದೇ ಬ್ರೇಕ್ ಹಾಕಿದ್ದರಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಈ ಎಲ್ಲ ವಿಷಯ ನನಗೆ ಗೊತ್ತಿದ್ದರೂ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ

ಅಪಘಾತವು ನಾವು ವಿಮೆ ನೀಡಿದ ವಾಹನ ಚಾಲಕನ ತಪ್ಪಿನಿಂದ ಆಗಿದ್ದು ಆದ್ದರಿಂದ 2 ನೇಎದುರುದಾರರು ಅರ್ಜಿದಾರರಿಗೆ ಪರಿಹಾರ ನೀಡುವ ಹೊಣೆಗಾರಿಕೆ ಹೊಂದಿಲ್ಲ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ-** 5 ನೇ ಎದುರುದಾರ ಪರ ಶ್ರೀ ಎನ ಬಿ ಯು ವಕೀಲರಿಂದ

ಅಪಘಾತವು ದಿಃ 28.03.2019 ರಂದು ಬೆಳಿಗ್ಗೆ 4 ಗಂಟೆಗೆ ಆಗಿರುತ್ತದೆ ಎಂದರೆ ಸರಿ. ಪೊಲೀಸು ದಾಖಲೆಗಳ ಪ್ರಕಾರ ಅಪಘಾತವು ಲಾರಿ ನಂ. ಕೆಎ 40 ಎ 0667 ರ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿ. ನಾನು ಅಪಘಾತವನ್ನು ಕಣ್ಣಾರೆ ಕಂಡಿಲ್ಲ. ಪೊಲೀಸು ದಾಖಲೆಗಳನ್ನು ನೋಡಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ. ನಾನು ನಮ್ಮ ವಿಮಾ ಕಂಪನಿಯವರು ಅಪಘಾತದ ಕುರಿತು ಮಾಡಿದ ತನಿಖೆಯ ಆಧಾರದ ಮೇಲಿಂದ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ. ನಾವು ಮಾಡಿದ ತನಿಖೆಯ ಪ್ರಕಾರ ಮತ್ತು ಪೊಲೀಸರು ಸಲ್ಲಿಸಿದ ಕಾಗದ ಪತ್ರಗಳ ಪ್ರಕಾರ ಲಾರಿಯ ಚಾಲಕನು ಆ ದಿವಸ ವಾಹನವನ್ನು ಅತೀ ಜೋರಿನಿಂದ ನಿಸ್ಕಾಳಜಿತನದಿಂದ ಚಲಾಯಿಸಿ ಮಿನಿ ಬಸ್ಸಗೆ ಡಿಕ್ಕಿಪಡಿಸಿ ಅಪಘಾತ ಮಾಡಿರುತ್ತಾನೆ ಎಂದರೆ ಸರಿ. ಅಪಘಾತವಾದಾಗ ಮಿನಿ ಬಸ್ಸಗೆ ವಿಮೆ ಚಾಲ್ತಿಯಲ್ಲಿ ಇತ್ತು. ಅದೇ ರೀತಿ ಸದರಿ ವಾಹನದ ಇನ್ನೀತರ ದಾಖಲೆಗಳು ಚಾಲ್ತಿಯಲ್ಲಿ ಇದ್ದವು ಎಂದರೆ ಸರಿ. ನಮ್ಮ ವಿಮಾ ಕಂಪನಿಯು ಮಿನಿ ಬಸ್ಸಗೆ ವಿಮೆ ನೀಡಿರುವುದರಿಂದ 5 ನೇ ಎದುರುದಾರು ಅರ್ಜಿದಾರರಿಗೆ ಯಾವುದೇ ಪರಿಹಾರ ನೀಡುವ ಹೊಣೆಗಾರಿಕೆ

ಹೊಂದಿಲ್ಲ ಎಂದರೆ ಸರಿ. 5 ನೇ ಎದುರುದಾರರು ವಿಮೆ ಒಪ್ಪಂದದ ಯಾವುದೇ ಉಲ್ಲಂಘನೆ ಮಾಡಿಲ್ಲ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(ಸದರಿ ಸಾಕ್ಷಿದಾರರ ಸಾಕ್ಷ್ಯವನ್ನು ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ,
ಶಿಗ್ಗಾಂವ.
(ಸ್ಥಳಃ ಸವಣೂರ)